Shreerangara purusharta kadambari Svatantrya Kathana

2019-20 23/08/2020

# ಶ್ರೀರಂಗರ ಪುರುಷಾರ್ಥ ಕಾದಂಬರಿ: ಸ್ವಾತಂತ್ರ್ಯಕಥನ

– ಮಂಡಲೀಕ ಮಾದರ

ಶ್ರೀರಂಗರು ಹುಟ್ಟಿದ್ದು 1904 ಸೆಪ್ಟೆಂಬರ್ ಬಿಜಾಪುರದ ಅಗರಖೇಡದಲ್ಲಿ. ಸ್ವಾತಂತ್ರ್ಯಪೂರ್ವ-ಸ್ವಾತಂತ್ರ್ಯ ನಂತರ ಸುಮಾರು 80 ವರ್ಷಗಳ ಅವರ ಜೀವಿತಾವಧಿ. ಯುವಕರಾಗಿದ್ದಾಗ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಗಾಂಧೀಜಿಯವರ ಪ್ರಭಾವ ಹೋರಾಟದ ಕಾವು ಕಿಚ್ಚು-ಕಸುವನ್ನು ಪಡೆದಿದ್ದರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಭಾರತೀಯ ಜನರ ನೀತಿ-ಅನೀತಿ, ನಂಬಿಕೆ-ನಯವಂಚಕತನ, ಜಾತಿಕಾರಣ-ರಾಜಕಾರಣ ಶ್ರದ್ಧಾವಂತಿಕೆ-ಗೊಡ್ಡು ಸಂಪ್ರದಾಯಗಳನ್ನು ಕಂಡು ಸಿಡುಕುತ್ತಿದ್ದರು. ಈ ಕುರಿತು ತಮ್ಮ ಭಾಷಣಗಳಲ್ಲಿ ಬರವಣಿಗೆಗಳಲ್ಲಿ ಆಕ್ರೋಶ ಹೊರಹಾಕಿ, ಹೋರಾಟ ಮಾಡುತ್ತಿದ್ದರು. ಕೊನೆಯವರೆಗೂ ಹೋರಾಟಗಾರರಾಗಿಯೇ ಉಳಿದರು. ಸ್ವಾತಂತ್ರ್ಯ ಚಳುವಳಿಯ ಹೋರಾಟವನ್ನು ಇಟ್ಟುಕೊಂಡು ಪುರುಷಾರ್ಥವೆಂಬ ಕಾದಂಬರಿಯನ್ನು ಶ್ರೀರಂಗರು ಬರೆದಿದ್ದಾರೆ.

ಲಂಡನ್ನಿನಲ್ಲಿ ಹೆರಾಲ್ಡ್ ಲಾಸ್ಕಿಯವರ ವಿದ್ಯಾರ್ಥಿಯಾಗಿದ್ದ ಶ್ರೀರಂಗರಿಗೆ ಮೊದಲಿನಿಂದಲೂ ಅಷ್ಟೇ. ಒಂದು ಕಾಲಕ್ಕೆ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸುವ ವಿಚಾರವೂ ಅವರಿಗಿದ್ದಿತು. ಹಾಗೆ ನೋಡಿದರೆ ಅವರ ಮೊದಲ ನಾಟಕ ಸ್ವಾರ್ಥ ತ್ಯಾಗ (1920) ರಾಜಕೀಯ ನಾಟಕವೇ ಆಗಿದ್ದಿತು. ಪ್ರಜಾಪ್ರಭುತ್ವದ ಆದರ್ಶವನ್ನು ಎತ್ತಿಹಿಡಿಯುವ ಮೂಲಕ ಈ ನಾಟಕದ ನಾಯಕ ಅವರ ಪ್ರಗತಿಪರ ಧೋರಣೆಯ ಸಂಕೇತವಾಗಿ ರೂಪುಗೊಂಡಿದ್ದು ಪುರುಷಾರ್ಥ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ. ಇಲ್ಲಿ ನಾಲ್ಕು ಪಾತ್ರಗಳಿವೆ. ಮಾಧವನು 1920–1942 ರವರೆಗಿನ ಎಲ್ಲ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿ ಎರಡು ಸಲ ಜೈಲು ಶಿಕ್ಷೆಯನ್ನನುಭವಿಸಿದ್ದಾನೆ. ಅವನ ಆಪ್ತ ಸ್ನೇಹಿತ ಶ್ರೀಧರ ರಾಜಕೀಯವಾಗಿ ಬೇರೆ ದಾರಿ ತುಳಿದವನು. ಸೌಮ್ಯವಾದಿ, ಕಮ್ಯೂನಿಸ್ಟ್, ಮಾಧವನ ಇನ್ನೊಬ್ಬ ಗೆಳೆಯ ಹಮ್ಮೂ ಅವನ ಪ್ರಭಾವಕ್ಕೆ ಒಳಗಾಗಿ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸಿದ್ದರೂ ಅವನಲ್ಲಿ ಮಾಧವನ ಧೈರ್ಯನಿಷ್ಠೆಯಿಲ್ಲ. ಅವನು ಒಂದು ಬಗೆಯ ಅವಕಾಶವಾದಿ ರಾಜಕೀಯ ಲಾಭ ಪಡೆದು ಈಗ ಮುಂಬೈ ಅಸೆಂಬ್ಲಿಯ ಸದಸ್ಯನಾಗಿದ್ದಾನೆ. ಈ ಮೂವರಿಗಿಂತ ಭಿನ್ನವಾದ ಅನಂತ ಐ.ಸಿ.ಎಸ್. ಅಧಿಕಾರಿ. ತನ್ನ ಮೂವರು ಕಾಲೇಜು ಸಹಪಾಠಿಗಳಲ್ಲಿ ಹಮ್ಮೂನೊಡನೆ ಮಾತ್ರ ಅವನ ಸಂಪರ್ಕವಿದೆ. "ನಾಲ್ಕು ಪಾತ್ರಗಳಲ್ಲಿ ಯಾವ ಪಾತ್ರವು ಇಂದಿನ ಯಾವುದೇ ಒಂದು ವ್ಯಕ್ತಿಗೆ ಅನ್ವಯಿಸುವುದಿಲ್ಲ. ನಾಲ್ವರ ವಿಚಾರಸರಣಿಯಲ್ಲಿ ನನ್ನ ವಿಚಾರಸರಣಿ ಯಾವುದೂ ಇಲ್ಲ. ಕತೆಯನ್ನು ಇತಿಹಾಸಾತ್ಮಕ ದೃಷ್ಟಿಯಿಂದಲೇ ನೋಡಬೇಕಾದುದು" ಎಂಬ ಸೂಚನೆಯನ್ನು

ವ್ಯವಹಾರ ಬುದ್ಧಿ. ರಾಜಕೀಯವನ್ನು ಅವಕಾಶವೆಂದು ತಿಳಿದು ಅವನದನ್ನು ಉಪಯೋಗಿಸಿಕೊಳ್ಳುತ್ತಾನೆ. ಇಂಥದೊಂದು ಜಾತಿಯೇ ಸ್ವತಂತ್ರ ಭಾರತದಲ್ಲಿ ಅಧಿಕಾರ ಕಬಳಿಸಿತೆನ್ನುವುದನ್ನು ಶ್ರೀರಂಗರು ಶೋಕಚಕ್ರದಲ್ಲಿ ತೋರಿಸಿದ್ದಾರೆ. ಅನಂತ-ಹಮ್ಮೂರಲ್ಲಿ ನಡೆಯುವ ಸಂಭಾಷಣೆಯು ಹೀಗಿದೆ. "ಮುಖ್ಯಮಂತ್ರಿ ಯಾರು? ಹಾಂ – ನಿನ್ನ ಗೆಳೆಯ. ಮಾಧವ! ಅಹುದಲ್ಲೋ" ತಾನೂ ನಕ್ಕಿದ್ದ. "ಮಾಧವ? ಅನಂತಾ ಮಾಧವನ ಜಾತಿಯ ದೇಶಭಕ್ತರ ಯುಗ ಮುಗಿಯಿತು" ಅನಂತರ ನಗೆಯಿಂದ ಕೇಳಿದ "ಈಗ ಯಾವ ಯುಗ ಪ್ರಾರಂಭವಾಗುವುದು?" ಹುಮ್ಮೂನು ಉಪನ್ಯಾಸದ ಶೀವಿಯಲ್ಲಿಯೇ ಪ್ರಾರಂಭಿಸಿದ "ಅನಂತಾ ಸತ್ಯ ಅಹಿಂಸೆ-ಸ್ವಾರ್ಥ, ತ್ಯಾಗ-ರಾಮರಾಜ್ಯ ಇದೆಲ್ಲಾ ಒಂದಾನೊಂದು ಕಾಲದಲ್ಲಿ ತತ್ವವಾಗಿದ್ದವು. ಅನಂತನು ಕೂಡ ಆ ಕಾಲದ ವಿಚಾರಧಾರೆಯ ಸಂಕೇತವಾಗಿದ್ದಾನೆ."

1942ರಲ್ಲಿಯೇ ಪ್ರಕಟವಾದ ಕಾರಂತರ ಔದಾರ್ಯದ ಉರುಳಲ್ಲಿ ಕಾದಂಬರಿಗೂ ಪುರುಷಾರ್ಥಕ್ಕೂ ಹಲವಾರು ಹೋಲಿಕೆಗಳಿವೆ. ಕೈಯಲ್ಲಿ ಧ್ವಜ ಹಿಡಿದು ಕಿಟಕಿಯೊಳಗಿಂದ ಸ್ವಾತಂತ್ರ್ಯ ದಿನದ ಮೆರವಣಿಗೆ ನೋಡಲೆಂದು ಕುಳಿತ ಮಾಧವ ಅಲ್ಲಿಯೇ ಪ್ರಾಣ ಬಿಡುವ ದೃಶ್ಯದೊಂದಿಗೆ ಕೊನೆಗೊಳ್ಳುವ ಪುರುಷಾರ್ಥ ಕಾರಂತರ ಕಾದಂಬರಿಗಿಂತ ಹೆಚ್ಚು ನಿರಾಶಾಮಯವಾಗಿದೆ. ಜಯಂತಿಯ ಸೆಪ್ಟೆಂಬರ್ 1942ರ ಸಂಚಿಕೆಯಲ್ಲಿ "ಪುರುಷಾರ್ಥದಲ್ಲಿ ಘಟನೆ ಅನುಭವಗಳೆರಡೂ ಸೇರಿ ಮನುಷ್ಯನ ಮೇಲೆ ಮಾಡಬಹುದಾದ ಪರಿಣಾಮಗಳಿವೆ. ಪ್ರಾಶಸ್ತ್ಯವಿದೆಂದು ಸರಿಯಾಗಿಯೇ ಗುರುತಿಸಿದರೂ ಸಾಮಾನ್ಯವಾಗಿ ಕಾದಂಬರಿಯಿಂದ ಓದುಗ ಅಪೇಕ್ಷಿಸುವ ಯಾವ ಅಂಶವನ್ನು ಇಲ್ಲಿ ಆತ ಕಾಣಲಾರ" ಎಂಬ ವಿಚಿತ್ರ ನಿರ್ಣಯವಿದೆ. ಕನ್ನಡದಲ್ಲಿ ಸ್ವತಂತ್ರ ರಾಜಕೀಯ ಕಾದಂಬರಿಗಳಿರದ ಕಾಲದಲ್ಲಿ ಶ್ರೀರಂಗರ ಈ ಕೃತಿಗೆ ಐತಿಹಾಸಿಕ ಮಹತ್ವವಿದೆ. ಹೀಗಿದ್ದರೂ ಸಿ.ಎಸ್. ರಾಮಚಂದ್ರನ್ ತಮ್ಮ ಲೇಖನದಲ್ಲಿ ಪುರುಷಾರ್ಥದ ಹೆಸರನ್ನು ಕೂಡ ಎತ್ತದಿರುವುದು ಈ ಕೃತಿಗೆ ಅನ್ಯಾಯ ಬಗೆದಂತಾಗಿದೆ.

**ಆಧಾರ ಗ್ರಂಥಗಳು**

1. ಆಧುನಿಕ ಕನ್ನಡ ಸಾಹಿತ್ಯದ ವಿರಾಟ ಪುರುಷ, ಶ್ರೀರಂಗ ಸಾರಸ್ವತ ಸಮೀಕ್ಷೆ ಪ್ರೊ. ಜಿ. ಎಸ್. ಆಮೂರ
2. ಶ್ರೀರಂಗ ಪುರುಷಾರ್ಥ, ಲಲಿತ ಸಾಹಿತ್ಯ ಮಾಲೆ 1947
3. ಶ್ರೀರಂಗ ಸಂಪದ, ಎಚ್.ವಿ. ವಂಕಟಸುಬ್ಬಯ್ಯ
4. ಶ್ರೀರಂಗ, ಡಾ. ಬಿ.ಎನ್. ಸುಮಿತ್ರಾಬಾಯಿ
5. ಶ್ರೀರಂಗ, ಡಾ. ಬಸವರಾಜ ಡೋಣೂರ

ಸಹಾಯಕ ಪ್ರಾಧ್ಯಾಪಕರು, ಎಸ್.ಎ. ಪದವಿ ಕಾಲೇಜು, ನರೇಗಲ್

# ಪುನರ್ನವ

ಭಾಗ ೩

ಸಂಪಾದಕರು
ಡಾ. ಈರಣ್ಣ ಇಂಜಗನೇರಿ
ಡಾ. ಶಿವಾನಂದ ಬ. ಟವಳಿ

೧೪. ಶ್ರೀರಂಗರ 'ಪುರುಷಾರ್ಥ' ಕಾದಂಬರಿ: ಸ್ವಾತಂತ್ರ್ಯಕಥನ ...88
– ಮಂಡಲೀಕ ಮಾದರ

೧೫. ರಾಮನಗರ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ...92
– ಚಲುವರಾಜು

೧೬. ಪಾಣಾರ ಜನಾಂಗ : ಸಾಂಸ್ಕೃತಿಕ ಚಹರೆಗಳು ...98
– ಚೇತನ್ ಶೆಟ್ಟಿ

೧೭. ಆಧುನಿಕ ಕಾವ್ಯ ಪರಂಪರೆಯಲ್ಲಿ ಭಾಷೆ ಹಾಗೂ ಛಂದಸ್ಸು ...108
– ವರುಣರಾಜ್ ಜಿ.

೧೮. ಬಹುಭಾಷಿಕತೆಯ ಸ್ವರೂಪ ...113
– ಗಿರೀಶ ಪಾಟೀಲ

೧೯. 'ಸಿರಿಸಂಪಿಗೆ' ನಾಟಕದಲ್ಲಿ ಹೆಣ್ಣಿನ ವಿದ್ರೋಹದ ನೆಲೆ ...120
– ಮಲ್ಲಪ್ಪ ಚನ್ನಭತ್ತಿ

೨೦. ಧರ್ಮ ಮತ್ತು ಮಹಿಳಾ ಸಮಾಜ: ವರ್ತಮಾನದ ಸವಾಲುಗಳು...125
– ಆರತಿ. ಎಂ. ಎಸ್.

೨೧. 'ಕರ್ವಾಲೊ' ಕಾದಂಬರಿಯ ಪರಿಸರವಾದಿ ವಿಮರ್ಶೆ ...131
– ಅನುಸೂಯಾ ಮಿತ್ರಾ

೨೨. ಅಕ್ಕಮಹಾದೇವಿ ವಚನಗಳಲ್ಲಿ ಪ್ರಕೃತಿ ಮತ್ತು ಆಧ್ಯಾತ್ಮ ...137
– ಮಂಜುನಾಥ ಮ. ಪಾಟೀಲ

೨೩. ಚಿಂಚಲಿ ಎಂಬ ಅಗ್ರಹಾರ ...142
– ಶರಣಪ್ಪ ಆಡಕಾರ

೨೪. ಹಳ್ಳಿಯ 'ದೈವದವರು' : ಸಾಂಸ್ಕೃತಿಕ ಮಹತ್ವ ...148
– ಮಲ್ಲಿಕಾರ್ಜುನ ಎಸ್. ಇಂಚಲ

೨೫. ಜೀವಣ್ಣ ಮಸಳಿಯವರ ಪತ್ರಿಕಾ ಸಾಹಿತ್ಯ–ಒಂದು ಅವಲೋಕನ ...151
– ಚಂದ್ರಶೇಖರ ಎಂ. ಕಾಳನ್ನವರ

೨೬. ಕನ್ನಡದ ಕಬೀರ ಪದ್ಮಶ್ರೀ ಇಬ್ರಾಹಿಮ್ ಸುತಾರ ...157
– ಹನುಮಂತಗೌಡ. ಆರ್. ಕಲ್ಮನಿ

೨೭. ಕೌಟಿಲ್ಯ ಮತ್ತು ಮಂಡಲ ಸಿದ್ಧಾಂತ ...161
– ರಘುವೀರ್